**SCCH-17**

IN THE COURT OF SMALL CAUSES
**M.V.C. NO.1116/2024 C/W 1117/2024**

Duly sworn on: 05.01.2026
P.W.4

DEPOSITION OF : DR. Abinay
FATHER'S NAME : Ramakrishna Reddy
AGE : 39 years
OCCUPATION : Medical Officer, Govt. hospital Chinthamani.
RESIDENCE : Chinthamani

***EXAMINATION IN CHIEF BY COUNSEL FOR PETITIONER:-***

Today I come to this court in pursuance of summons issued by this court and I have produced certain documents which are in our custody and the same are marked as follows:

| | |
|---|---|
| Ex.P22 to 25 | True copy of MLC Register Extracts 2 in nos. and Police intimation 2 in nos. (Original is compared with true copy, found correct and returned to witness) |

I was duty doctor on 06.09.2023 and the Ex.P22 to and 23 is in my handwriting. In Ex.P22 and 23 we have taken the LTM of the patients. It is false to suggest that, I have not mentioned the proper details of the accident in Ex.P22 and 23 MLC Register extract.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಅರ್ಜಿದಾರರ ಪರ ವಕೀಲರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು)**

***<u>CROSS EXAMINATION BY COUNSEL FOR PETITIONER:</u>***

ನಿ.ಪಿ 22 ಮತ್ತು 23 ರ ಪ್ರಕಾರ ಅರ್ಜಿದಾರರಾದ ಮಾದೇಶ ಮತ್ತು ರೆಡ್ಡಿ ರವರನ್ನು ಶ್ಯಾಮಲ ಎನ್ನುವವರು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಸದರಿ ಶ್ಯಾಮಲ ರವರು ನೀಡಿದ ಹೇಳಿಕೆಯ ಆಧಾರದ ಮೇಲೆ ನಿ.ಪಿ 22 ಮತ್ತು 23 ಅನ್ನು ಬರೆದಿರುತ್ತೇವೆ. ನಿ.ಪಿ 22 ಮಾದೇಶ ರವರಿಗೆ "Alleged history of RTA two wheeler @ Bandikota" ಎಂದು ಬರೆದಿದ್ದು ಅದೇ ರೀತಿ ನಿ.ಪಿ 23 ರವರ ರೆಡ್ಡಿ ರವರ ಎಂ ಎಲ್ ಸಿ ಅಲ್ಲಿ "alleged history of RTA (two wheeler V/s Two wheeler @ Bandikota)" ಎಂದು ಬರೆದಿರುತ್ತೇನೆ ಎಂದರೆ ಸರಿ. ನಿ.ಪಿ 22 ರಲ್ಲಿ ಶ್ಯಾಮಲ ರವರ ಹೆಸರಿನ ಮುಂದೆ wife ಎಂದು ಬರೆದು ನಂತರ ಅದನ್ನು ಹೊಡೆದು ಹಾಕಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಶ್ಯಾಮಲ ರವರು ರೆಡ್ಡಿ ರವರ ಹೆಂಡತಿ ಎಂದು ಗೊತ್ತಾಗಿದ್ದರಿಂದ ಅದೇ ಸಮಯದಲ್ಲಿ ಹೊಡೆದು ಹಾಕಿರುತ್ತೇವೆ. ಸದರಿ ಶ್ಯಾಮಲ ರವರೇ ಮಾದೇಶ ಮತ್ತು ರೆಡ್ಡಿ ರವರ ಅಪಘಾತದ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. ನಾನು ಸದರಿ ನಿ.ಪಿ 22 ಮತ್ತು 23 ರಲ್ಲಿ ತಪ್ಪು ಮಾಹಿತಿಗಳನ್ನು ಬರೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಟೆಂಡರ್ ಏನೂ ಹೇಳಿರುತ್ತಾರೊ ಅದನ್ನು ಬರೆದಿರುತ್ತೇನೆ ಎಂದು ನುಡಿದಿರುತ್ತಾರೆ. ಶ್ಯಾಮಲ ರವರು ಅವಿದ್ಯಾವಂತೆ ಆಗಿದ್ದು ಆಕೆಗೆ ಸರಿಯಾಗಿ ಮಾಹಿತಿ ಇರದೇ ಅಪಘಾತ ದ್ವಿಚಕ್ರ ವಾಹನ

ಮತ್ತು ಕಾರಿನ ನಡುವೆ ಆಗಿದ್ದರೂ two wheeler V/s two wheeler ಎಂದು ಹೇಳಿರುವ ಸಾದ್ಯತೆ ಇರುತ್ತದೆ ಎಂದರೆ ಇರಬಹುದು. ನಿ.ಪಿ 24 ಮತ್ತು 25 ರಲ್ಲಿ ಕೇವಲ ಶ್ಯಾಮಲ ರವರ ಹೆಸರು ಇದ್ದು ಅಪಘಾತದಲ್ಲಿ ಒಳಪಟ್ಟ ವಾಹನಗಳ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸದರಿ ನಿ.ಪಿ 24 ಮತ್ತು 25 ರಲ್ಲಿ ಆ ರೀತಿ ವಾಹನಗಳ ಮಾಹಿತಿ ಬರೆಯಲು ಅವಕಾಶಗಳು ಇರುವುದಿಲ್ಲ ಹಾಗಾಗಿ ಕೇವಲ ಅಪಘಾತ ಎಂದು ಗುರುತಿಸಿ ಕಳುಹಿಸಿರುತ್ತೇವೆ ಎಂದು ಸಾಕ್ಷಿ ಸ್ವತಃ ನುಡಿದಿರುತ್ತಾರೆ.

***<u>CROSS EXAMINATION BY COUNSEL FOR R-2:</u>***

ರೆಡ್ಡಿ ಮತ್ತು ಮಾದೇಶ ಇಬ್ಬರು ನಮ್ಮ ಆಸ್ಪತ್ರೆಗೆ ಬಂದಾಗ ಇಬ್ಬರಿಗೂ ಪ್ರಜ್ಞೆ ಇತ್ತು. ದಿ. 06.09.2023 ರಿಂದು ಇಲ್ಲಿಯವರೆಗೂ ಸದರಿ ರೆಡ್ಡಿ ಅಥವಾ ಮಾದೇಶ ರವರು ನಿ.ಪಿ 22 ಮತ್ತು 23 ರಲ್ಲಿ ಅಪಘಾತದ ವಾಹನಗಳ ಮಾಹಿತಿ ತಪ್ಪಾಗಿ ನಮೂದಾಗಿರುತ್ತದೆ ಅದನ್ನು ಸರಿಪಡಿಸುವಂತೆ ಕೋರಿ ಇದುವರೆಗೂ ಯಾವುದೇ ಅರ್ಜಿ ಕೊಟ್ಟಿಲ್ಲ.

**<u>ಮರು ವಿಚಾರಣೆ:</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**19ನೇ ಹೆಚ್ಚುವರಿ ನ್ಯಾಯಾಧೀಶರು**
**ಲಘು ವ್ಯವಹಾರಗಳ ನ್ಯಾಯಾಲಯ**
**ಬೆಂಗಳೂರು.**